KAUK620016912024

**ಪ್ರಧಾನ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ**

**ಕ್ರಿ.ಮಿಸ್.ನಂಬರಃ 74/2024**

**ದಿನಾಂಕಃ 03 ನೇ ಆಗಸ್ಟ್ 2024**

**ಉಪಸ್ಥಿತರುಃ ಶ್ರೀ ಚಂದ್ರಶೇಖರ ಬಣಕಾರ.,**

***ಬಿ.ಎ.,ಎಲ್.ಎಲ್.ಬಿ., ಎಲ್.ಎಲ್.ಎಂ.,***

**ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿ, ಹೊನ್ನಾವರ**

**ಅರ್ಜಿದಾರರುಃ** **ಗೀತಾ ಈಶ್ವರ ನಾಯ್ಕ,**
ವಯಸ್ಸುಃ 48 ವರ್ಷ,ಉದ್ಯೋಗಃ-,
ಸಾಕೀನಃ ಹಿರೆಹಿತ್ತಲು, ಜಲವಳ್ಳಿ,
ತಾಃ ಹೊನ್ನಾವರ, ಉ.ಕ.,
ಈಶವರ ಲಕ್ಷ್ಮಣ ನಾಯ್ಕ(ಮೃತ)
ಇವರ ಹೆಂಡತಿ.,

**( ಪರವಾಗಿಃ.ಆರ್.ಎಮ್.ಬಿ., ವಕೀಲರು)**

**- ವಿರುದ್ಧ -**

**ಎದ್ರುದಾರರುಃ** 01. **ಮಾನ್ಯ ತಹಶೀಲ್ದಾರರು,**
ಜನನ ಮರಣ ನೋಂದಣಾಧಿಕಾರಿಗಳು,
ಹೊನ್ನಾವರ.ತಾಲೂಕಃ ಹೊನ್ನಾವರ (ಉ.ಕ)

02. ಮಂಜುನಾಥ ಲಕ್ಷ್ಮಣ ನಾಯ್ಕ,
ವಃ 60 ವರ್ಷ, ಸಾಃ ಹಿರೆಹಿತ್ತಲು, ಜಲವಳ್ಳಿ,
ತಾಃ ಹೊನ್ನಾವರ, ಉ.ಕ.,

03. ಈಶ್ವರ ಲಕ್ಷ್ಮಣ ನಾಯ್ಕ(ಮೃತ)
ಇವನ ಮಕ್ಕಳು

03 ಅ. ಶ್ವೇತಾ ಈಶ್ವರ ನಾಯ್ಕ,
ವಃ28 ವರ್ಷ, ಸಾಃ ಹಿರೆಹಿತ್ತಲು, ಜಲವಳ್ಳಿ,
ತಾಃ ಹೊನ್ನಾವರ, ಉ.ಕ.,

03 ಬ. ಚೇತನಾ ಈಶ್ವರ ನಾಯ್ಕ,
ವಃ 26 ವರ್ಷ, ಸಾಃ ಹಿರೆಹಿತ್ತಲು, ಜಲವಳ್ಳಿ,
ತಾಃ ಹೊನ್ನಾವರ, ಉ.ಕ.,

03 ಕ. ವನಿತಾ ಈಶ್ವರ ನಾಯ್ಕ,
ವಃ 22 ವರ್ಷ, ಸಾಃ ಹಿರೆಹಿತ್ತಲು, ಜಲವಳ್ಳಿ,
ತಾಃ ಹೊನ್ನಾವರ, ಉ.ಕ.,

04. ಲಕ್ಷ್ಮೀ ವಾಸು ನಾಯ್ಕ (ಮೃತ),
ಇವಳ ವಾರಸುದಾರರು,

04 ಅ. ಮಾಲತಿ ಎನ್ ನಾಯ್ಕ,
ವಃ 42 ವರ್ಷ, ಸಾಃ ಐಟಿಐ ಲೇಔಟ್, ಶಿವ ದೇವಸ್ಥಾನದ ಹತ್ತಿರ, ಎಲುಕುಂಟೆ,
ಬೆಂಗಳೂರು ದಕ್ಷಿಣ.

04 ಬ. ಕಮಲಾ ಗಣೇಶ ನಾಯ್ಕ,
ವಃ 39 ವರ್ಷ, ಸಾಃ 10 ನೇ ಕ್ರಾಸ್, 10 ನೇ ಮೇನ್, ಐಟಿಐ ಬಡಾವಣೆ
ಬೆಂಗಳೂರು, ದಕ್ಷಿಣ, ಬೆಂಗಳೂರು.
04 ಕ. ಲಂಬೋಧರ ವಾಸು ನಾಯ್ಕ,
ವಃ 48 ವರ್ಷ, ಸಾಃ #46, ಕೆಳದಿ ರೋಡ, 2 ನೇ ಕ್ರಾಸ್, ,
ತಾಃ ಸಾಗರ, ಶಿವಮೊಗ್ಗ,
05. ನಾಗಮ್ಮ ಮಾಳಪ್ಪ ನಾಯ್ಕ,
ವಃ 20 ವರ್ಷ, ಸಾಃ ಹನಬಿ, ಅನೀಲಗೋಡ, ಬೇರಂಕಿ,
ತಾಃ ಹೊನ್ನಾವರ, ಉ.ಕ.,
06. ಮಂಗಲಾ ಬಾಬು ನಾಯ್ಕ, (ಮೃತ)
ಇವಳ ವಾಸುದಾರರು,
06 ಅ. ಅಭೀಷೇಕ್ ಬಾಬು ನಾಯ್ಕ,
ವಃ 23 ವರ್ಷ, ಸಾಃ ಜನಕಡ್ಕಲ್, ಮುಟ್ಟಾ
ತಾಃ ಹೊನ್ನಾವರ, ಉ.ಕ.,.
06 ಬ. ತೇಜಸ್ ಬಾಬು ನಾಯ್ಕ,
ವಃ 21 ವರ್ಷ, ಸಾಃ ಜನಕಡ್ಕಲ್, ಮುಟ್ಟಾ
ತಾಃ ಹೊನ್ನಾವರ, ಉ.ಕ.,

(R-1,2,3atoc,4atoc,5&6a&b absent)

## ಆದೇಶ

ಅರ್ಜಿದಾರರು ಸದರಿ ಅರ್ಜಿಯನ್ನು ಜನನ ಮರಣ ನೋಂದಣಿ ಕಾಯಿದೆ ಕಲಂ13(3)ರಡಿಯಲ್ಲಿ ಸಲ್ಲಿಸಿ ಅರ್ಜಿದಾರರ ಅತ್ತೆಯಾದ ಹೊನ್ನು ಲಕ್ಷ್ಮಣ ನಾಯ್ಕ ಇವರು ದಿನಾಂಕಃ 05-02-2022 ರಂದು ಹೊನ್ನಾವರ ತಾಲೂಕಿನ, ಜಲವಳ್ಳಿ ಗ್ರಾಮದ ಹಿರೇಹಿತ್ತಲು ಮಜರೆಯಲ್ಲಿರುವ ಅವರ ಸ್ವಂತ ಮನೆಯಲ್ಲಿ ಮರಣ ಪಟ್ಟ ಬಗ್ಗೆ ನೋಂದಾಯಿಸಿಕೊಂಡು ಮರಣ ಧೃಡೀಕರಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ಆದೇಶಿಸಬೇಕೆಂದು ಪ್ರಾರ್ಥನೆ ಸಲ್ಲಿಸಿರುತ್ತಾರೆ.

**2. ಅರ್ಜಿದಾರರ ಅರ್ಜಿಯ ಸಂಕ್ಷಿಪ್ತ ಸಂಗತಿಗಳು ಈ ಕೆಳಕಂಡಂತೆ ಇರುತ್ತದೆ.**

ಅರ್ಜಿದಾರರ ಅತ್ತೆಯಾದ ಹೊನ್ನು ಲಕ್ಷ್ಮಣ ನಾಯ್ಕ ಇವರು ದಿನಾಂಕಃ 05-02-2022 ರಂದು ಹೊನ್ನಾವರ ತಾಲೂಕಿನ, ಜಲವಳ್ಳಿ ಗ್ರಾಮದ ಹಿರೇಹಿತ್ತಲು ಮಜರೆಯಲ್ಲಿರುವ ಅವರ ಸ್ವಂತ ಮನೆಯಲ್ಲಿ ಮರಣಪಟ್ಟಿರುತ್ತಾರೆ. ಅರ್ಜಿದಾರರ ಕುಟುಂಬದವರಿಗೆ ಅಷ್ಟೊಂದು ಕಾನೂನು ತಿಳುವಳಿಕೆ ಇಲ್ಲದ ಕಾರಣ ಅರ್ಜಿದಾರರು ಸದರೀ ಮರಣ ದಿನಾಂಕವನ್ನು ನೋಂದಣಿ ಮಾಡಿಸಿದ್ದು ಇರುವುದಿಲ್ಲ. ಅರ್ಜಿದಾರರಿಗೆ ವಾರಿಸಾ ಮಾಡುವ ಸಲುವಾಗಿ ಅವರ ಮರಣ ದಾಖಲೆಯನ್ನು ಪಡೆಯುವುದು ಅವಶ್ಯಕತೆ ಇರುತ್ತದೆ. ಆದ್ದರಿಂದ ಸದರಿ ಅರ್ಜಿಯನ್ನು ಸಲ್ಲಿಸಿ ಅರ್ಜಿಯಲ್ಲಿ ಕೇಳಿರುವಂತೆ ಆದೇಶವನ್ನು ಮಾಡಬೇಕಾಗಿ ಪ್ರಾರ್ಥಿಸಿರುತ್ತಾರೆ.

**3.** ಸದರಿ ಅರ್ಜಿಯನ್ನು ಅರ್ಜಿದಾರರು ಸಲ್ಲಿಸಿದ ನಂತರ ಈ ನ್ಯಾಯಾಲಯವು ಎದುರುದಾರ ಸಂಖ್ಯೆ:1 ರವರಿಗೆ ನೋಟೀಸ್ ಕಳಿಸಿದ್ದು, ಎದುರುದಾರ ಸಂಖ್ಯೆ:1 ರವರು ನ್ಯಾಯಾಲಯಕ್ಕೆ ಹಾಜರಾಗದೇ ಅರ್ಜಿದಾರರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿರುವುದಿಲ್ಲ. ನಂತರ ದಿನಪತ್ರಿಕೆಯಲ್ಲಿ ಈ ಕುರಿತು ಪ್ರಕಟಣೆ ಹೊರಡಿಸಿದ್ದರೂ ಯಾರೂ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ತಕರಾರು ಸಲ್ಲಿಸಿರುವುದಿಲ್ಲ. ಅದ್ದರಿಂದ ಎದುರುದಾರರನ್ನು ಏಕಪಕ್ಷೀಯವಾಗಿ ಇರಿಸಲಾಯಿತು.

**4.** ವಾದ ಆಲಿಸಿರುತ್ತೇನೆ.

**5.** ಈ ನ್ಯಾಯಾಲಯವು ನಿರ್ಧರಿಸಬೇಕಾದ ಅಂಶಗಳೆಂದರೆಃ

1. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವಂತಹ ಪರಿಹಾರ ಪಡಯಲು ಅರ್ಹರೇ?

2. ಮಾಡುವ ಆದೇಶ ಏನು?

**6**. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆಃ

ಅಂಶಃ 1 ಸಕಾರಾತ್ಮಕವಾಗಿ

ಅಂಶಃ 2. ಅಂತಿಮ ಆದೇಶದಂತೆ, ಈ ಕೆಳಗೆ ವಿವರಿಸಿರುವ ಕಾರಣಗಳಿಗಾಗಿ.

**ಕಾ ರ ಣ ಗ ಳು**

**7.** ಅರ್ಜಿಯಲ್ಲಿ ಪ್ರತಿಪಾದಿಸಿದ ಸಂಗತಿಗಳನ್ನು ಪುಷ್ಠಿಕರಿಸುವ ಸಲುವಾಗಿ ಅರ್ಜಿದಾರನನ್ನು ಪಿಡಬ್ಲು-1 ಎಂದು ವಿಚಾರಣೆಗಳೊಪಟ್ಟಿದ್ದು, ಮುಖ್ಯ ವಿಚಾರಣೆಯ ಬದಲಾಗಿ ಒಂದು ಸಾಕ್ಷ್ಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಹಾಗೂ ನಾಲ್ಕು ದಾಖಲಾತಿಗಳನ್ನು ನಿಪಿ-1 ರಿಂದ 3(ಎ) ಎಂದು ನಿಶಾನೆಯಾಗಿ ಗುರುತಿಸಿಕೊಂಡಿರುತ್ತಾರೆ. ತನ್ನ ಮುಖ್ಯ ವಿಚಾರಣೆಯಲ್ಲಿ ಅರ್ಜಿಯಲ್ಲಿ ಹೇಳಿದ ಸಂಗತಿಗಳನ್ನೇ ಪುನರುಚ್ಚರಿಸಿದ್ದಾರೆ. ಅರ್ಜಿದಾರರ ಅತ್ತೆಯಾದ ಹೊನ್ನು ಲಕ್ಷ್ಮಣ ನಾಯ್ಕ ಇವರು ದಿನಾಂಕಃ 05-02-2022 ರಂದು ಹೊನ್ನಾವರ ತಾಲೂಕಿನ, ಜಲವಳ್ಳಿ ಗ್ರಾಮದ ಹಿರೇಹಿತ್ತಲು ಮಜರೆಯಲ್ಲಿರುವ ಅವರ ಸ್ವಂತ ಮನೆಯಲ್ಲಿ ಮರಣ ಹೊಂದಿದ್ದು, ಸದ್ರಿ ಮರಣದ ದಿನಾಂಕವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿಲ್ಲವೆಂದೂ, ಅರ್ಜಿದಾರರಿಗೆ ವಾರಿಸಾ ಮಾಡುವ ಸಲುವಾಗಿ ಅವರ ಮರಣ ದಾಖಲೆ ಅವಶ್ಯಕತೆ ಇರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪಿ.ಡಬ್ಲ್ಯೂ.1 ರವರು ಸಂಬಂಧಪಟ್ಟ ಜನನ ಮತ್ತು ಮರಣ ನೋಂದಣಿ ಇಲಾಖೆಯವರು ಕೊಟ್ಟಂತಹ ಅಲಭ್ಯ ಪ್ರಮಾಣಪತ್ರವನ್ನು ನಿಪಿ-1 ಎಂದೂ, ಆಧಾರ್ ಕಾರ್ಡಿನ ನೋಟರೈಸ್ಡ ಪ್ರತಿಯನ್ನು ನಿಪಿ-2 ಹಾಗೂ ದಿನಾಂಕ 29-06-2024 ರ ಕನ್ನಡ ಜನಾಂತರಂಗ ಪತ್ರಿಕೆಯನ್ನು ನಿಪಿ-3 ಮತ್ತು ಪ್ರಕಟಣೆಯ ಭಾಗವನ್ನು 3(ಎ) ರಂತೆ, ಅವುಗಳನ್ನು ಪರಿಶೀಲಿಸಿ ನೋಡಿದಾಗ **"ಹೊನ್ನು ಲಕ್ಷ್ಮಣ ನಾಯ್ಕ"** ಇವರ ಮರಣ ದಿನಾಂಕವು ಜನನ ಮತ್ತು ಮರಣ ರೆಜಿಸ್ಟರ ದಾಖಲಾತಿಯಲ್ಲಿ ನೋಂದಣಿಯಾಗಿರುವುದಿಲ್ಲವೆಂದೂ ತಿಳಿದು ಬರುತ್ತದೆ. ಯಾವುದೇ ಆಸ್ತಿಗಳನ್ನು ವಾರಸಾ ಪ್ರಕಾರ ಖಾತೆ ಮಾಡಿಕೊಳ್ಳಬೇಕಾದರೆ ಮರಣ ಪ್ರಮಾಣಪತ್ರ ಅತಿ ಅವಶ್ಯವಾಗಿ ಬೇಕಾಗಿರುತ್ತದೆ. ಒಂದು ವೇಳೆ ಈ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟ ವ ಹಾನಿಯಾಗುತ್ತದೆ. ಈ ಎಲ್ಲಾ ಕಾರಣ ಮತ್ತು ಸಂಗತಿಗಳಿಂದ ಈ ಅರ್ಜಿ ಪುರಸ್ಕರಿಸಲು ಯೋಗ್ಯವೆಂದೂ ಕಂಡು ಬರುತ್ತದೆ. ಅದ್ದರಿಂದ ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೇಳಿರುವ ಪರಿಹಾರ ಪಡೆಯಲು ಅರ್ಹರಾಗಿರುತ್ತಾರೆಂದು ಅಭಿಪ್ರಾಯಪಟ್ಟು ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

**8.** **ಅಂಶಃ 2.** ಮೇಲೆ ವಿವರಿಸಿರುವ ಕಾರಣಗಳಿಗಾಗಿ ಈ ಕೆಳಗಿನ ರೀತಿ ಆದೇಶ ಮಾಡಲಾಗಿದೆ.

**ಆ ದೇ ಶ**

ಅರ್ಜಿದಾರರು ಜನನ ಮತ್ತು ಮರಣ ನೋಂದಣಿ ಕಾಯ್ದೆ 1969 ಕಲಂ 13(3) ರಡಿಯಲ್ಲಿ ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿದಾರರ ಅತ್ತೆಯಾದ ಹೊನ್ನು ಲಕ್ಷ್ಮಣ ನಾಯ್ಕ ಇವರು ದಿನಾಂಕಃ 05-02-2022 ರಂದು ಹೊನ್ನಾವರ ತಾಲೂಕಿನ, ಜಲವಳ್ಳಿ

ಗ್ರಾಮದ ಹಿರೇಹಿತ್ತಲು ಮಜರೆಯಲ್ಲಿರುವ ಅವರ ಸ್ವಂತ ಮನೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ಮರಣ ದಾಖಲಾತಿಯಲ್ಲಿ ನೋಂದಾಯಿಸಿಕೊಂಡು ಆ ಬಗ್ಗೆ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದ್ರುದಾರ-1 ರವರಿಗೆ ಆದೇಶಿಸಿದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಗಣಕೀಕೃತ ಮಾಡಿಸಿ ನಂತರ ಪರಿಷ್ಕರಿಸಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ 03 ನೇ ಆಗಸ್ಟ್ 2024 ರಂದು ಘೋಷಿಸಲಾಯಿತು).

**(ಚಂದ್ರಶೇಖರ ಬಣಕಾರ.,)**
**ಪ್ರಧಾನ ಪ್ರ.ದ.ನ್ಯಾದಂಡಾಧಿಕಾರಿಗಳು,ಹೊನ್ನಾವರ.**

**ಅರ್ಜಿದಾರರ ಪರ ವಿಚಾರಣೆ ಗೊಂಡಿರುವ ಸಾಕ್ಷ್ಯಗಳುಃ**

ಪ್ರಾ. ಸಾ.1- **ಗೀತಾ ಈಶ್ವರ ನಾಯ್ಕ,**

**ಅರ್ಜಿದಾರರ ಪರ ಗುರುತಿಸಿಕೊಂಡಿರುವ ದಾಖಲೆಗಳುಃ**

ನಿ.ಪಿ.1 - ಅಲಭ್ಯ ಪ್ರಮಾಣ ಪತ್ರ

ನಿ.ಪಿ.2 - ಆಧಾರ ಕಾರ್ಡಿನ ನೋಟರೈಸ್ಡ ಪ್ರತಿ

ನಿ.ಪಿ.3 - ದಿನಾಂಕಃ 29-06-2024 ರ ಕನ್ನಡ ಜನಾಂತರಂಗ ಪತ್ರಿಕೆ

ನಿ.ಪಿ.3(ಎ) - ಪತ್ರಿಕೆಯ ಪ್ರಕಟಣೆಯ ಒಂದು ಭಾಗ.

**ಪ್ರಧಾನ ಪ್ರ.ದ.ನ್ಯಾದಂಡಾಧಿಕಾರಿಗಳು,ಹೊನ್ನಾವರ.**